ಹುಬ್ಬಳ್ಳಿ -ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ರಾಯನಾಳ ಗ್ರಾಮದಲ್ಲಿ ಸಾರ್ವಜನಿಕ ಸೌಕರ್ಯವನ್ನು ಒದಗಿಸುವುದು

2957 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿದ ರಾಯನಾಳ ಗ್ರಾಮದ ರಿ. ಸರ್ವೆ ನಂ. 88ರಲ್ಲಿ ಸಾರ್ವಜನಿಕ ಸೌಕರ್ಯ ಇಲ್ಲದಿರುವ ಕಾರಣ ನಾಗರೀಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದಲ್ಲಿ ಅವಶ್ಯಕ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ತೀವ್ರ ಕ್ರಮಗಳೇನು?*

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಈಗಾಗಲೇ ರಸ್ತೆ ಹಾಗೂ ಗಟಾರಗಳ ಕಾಮಗಾರಿಗಳು ಹಾಗೂ ವಿದ್ಯುಚ್ಛಕ್ತಿಯ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ. ವಿದ್ಯುಚ್ಛಕ್ತಿ ಸಂಪರ್ಕ (ಕನಕ್ಷನ್) ಸಲುವಾಗಿ ವಿದ್ಯುತ್ ಅಧಿಕಾರಿಗಳ ಸಂಗಡ ಚರ್ಚಿಸಲಾಗುತ್ತದೆ. ಕುಡಿಯುವ ನೀರಿನ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯವರಿಂದ ಅಂದಾಜು ಪತ್ರಿಕೆ ಬಂದಿದ್ದು, ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

2. ಪ್ರಾಧಿಕಾರವು ತಾತ್ಕಾಲಿಕ ನೀರಿನ ಅವಶ್ಯಕತೆಗಾಗಿ ಒಂದು ಬೋರ್‌ವೆಲ್ಲನ್ನು ಹಾಕಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ.

ಹುಬ್ಬಳ್ಳಿ ಮಹಾನಗರ ಮಧ್ಯಭಾಗದಲ್ಲಿರುವ ಓವರ್ ಫ್ಲೈ ಬ್ರಿಡ್ಜ್ ನಿರ್ಮಾಣ.

2958 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರ ಮಧ್ಯಭಾಗದಲ್ಲಿರುವ ಟ್ರಾಫಿಕ್ ಐಲೆಂಡ್ ಭಾಗದಲ್ಲಿ ಸಂಚಾರದಟ್ಟಣೆ ಜಾಸ್ತಿ ಆಗಿ ನಾಗರೀಕರಿಗೆ ಆ ಭಾಗದಲ್ಲಿ ರಸ್ತೆಗಳನ್ನು ದಾಟಲು ಮತ್ತು ಅಡ್ಡಾಡಲು ತೊಂದರೆ ಆಗುವುದರಿಂದ ಅಲ್ಲಿ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಓವರ್ ಫ್ಲೈ ಬ್ರಿಡ್ಜ್ ಕಟ್ಟುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಲ್ಲಿ ಈ ಕುರಿತು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಸದರಿ ಜಾಗದಲ್ಲಿ ಸರ್ವೇ ಅಂದಾಜು ವೆಚ್ಚ 237 ಲಕ್ಷ ರೂ.ಗಳಿಗೆ ಪ್ರಸ್ತಾವನೆ ಬಂದಿದ್ದು ಈ ಕಾಮಗಾರಿಕೆ ಆರ್ಥಿಕ ನೆರವು ನೀಡುವ ಬಗ್ಗೆ ಕರ್ನಾಟಕ ಅರ್ಬನ್ ಇನ್‌ಫ್ರಾ ಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಯ್ಯಂಡ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ವರದಿ ನೀಡಲು ಕೋರಿದೆ.